ಮಾಡಿರತಕ್ಕಂಥ ಸಂದರ್ಭದಲ್ಲಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ 'ಸಿಂಗಲ್ ವಿಂಡೋ ಏಜೆನ್ಸಿ' ಎಂದು ಹೇಳಿ ಸ್ಥಾಪನೆ ಮಾಡಿರುವಂಥದ್ದು. ಆ 'ಸಿಂಗಲ್ ವಿಂಡೋ ಏಜೆನ್ಸಿ'ಗೆ ಎಷ್ಟು ರೋಗಗ್ರಸ್ಥ ಕೈಗಾರಿಕೆಗಳು ಇವೆ ಆ ಕೈಗಾರಿಕೆಗಳವರು ಅರ್ಜಿಯನ್ನು ಹಾಕಿ ಬೇಕಾದಂಥ ಸಹಾಯವನ್ನು ಪಡೆಯುವುದರ ಬಗ್ಗೆ ಸರ್ಕಾರದವರು ನೇರವಾದ ಆದೇಶ ಹೊರಡಿಸಿದ್ದರು. ಅದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ, ನಾವು ಮುಂದಿನ ದಿನಗಳಲ್ಲಿ ಆದೇಶ ನೀಡಿದ್ದೇವೆ, ಆ ಮಾಹಿತಿ ನಮ್ಮ ಹತ್ತಿರ ಲಭ್ಯವಿಲ್ಲ ಅಂತ ಹೇಳಿ, ಇವೊತ್ತು ನಮಗೆ ಕೇಂದ್ರೀಯ ರಿಸರ್ವ್ ಬ್ಯಾಂಕ್‌ನವರು ಆ ಮಾಹಿತಿಯನ್ನು ಕೊಡಬೇಕು ಎಂದು ಹೇಳಿದರೆ, ಇದು ವಿಷಾದನೀಯ ಸಂಗತಿಯಾಗುತ್ತದೆ. ಇದರ ಜೊತೆಗೆ ತಮ್ಮ ಮೂಲಕ ಅವರನ್ನು ನಾನು ಪ್ರಶ್ನೆ ಮಾಡುವುದೇನೆಂದರೆ, 1994-95ನೇ ಸಾಲಿನಲ್ಲಿ ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾದಂಥ ಸಹಾಯ ಧನ 68 ಕೋಟಿ 12 ಲಕ್ಷ ರೂಪಾಯಿಗಳು ಅದರಲ್ಲಿ ಈಗಾಗಲೇ ನಾವು 33.12 ಲಕ್ಷ ರೂಪಾಯಿಗಳನ್ನು ಕೊಟ್ಟಾಗಿದೆ ಎಂದು ಹೇಳಿದ್ದಾರೆ? ಯಾವ ವರ್ಷದಲ್ಲಿ ತಾವು ಈ 33.12 ಕೋಟಿ ರೂಪಾಯಿಗಳನ್ನು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಹಾಯಧನದ ರೂಪದಲ್ಲಿ ಒದಗಿಸಿಕೊಟ್ಟಿದ್ದೀರಿ ಎನ್ನುವುದರ ಬಗ್ಗೆ ದಯಮಾಡಿ ಮಾಹಿತಿಯನ್ನು ಕೊಡಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಎನ್.ಎಂ. ನಬಿ : ಮಾನ್ಯ ಸಭಾಧ್ಯಕ್ಷರೇ, ನಾನು ಅವರಿಗೆ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳನ್ನು ಗುರುತಿಸತಕ್ಕಂಥದ್ದರ ಬಗ್ಗೆ ಹೇಳಿದೆನೆ ಹೊರತು ಅದಕ್ಕೆ ನಾವು ಸಹಾಯಧನವನ್ನು ಕೊಡುತ್ತಿಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳಲಿಲ್ಲ. ಈಗಾಗಲೇ ರೋಗಗ್ರಸ್ಥವಾಗಿರತಕ್ಕಂಥ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ 50 ಸಾವಿರಕ್ಕೆ ಮೀರದ ಹಾಗೆ ಹಣ ಕೊಡುವುದಕ್ಕೆ ಮತ್ತು ಅದನ್ನು ರಿಶೆಡ್ಯೂಲ್ಡ್ ಮಾಡಿ ಕೊಡತಕ್ಕಂಥ ಪದ್ಧತಿ ಜಾರಿಯಲ್ಲಿದೆ. ಈ ಹಣ ಅವರಿಗೆ ಬಹಳ ಕಡಿಮೆಯಾಗುತ್ತದೆ ಎಂದು ನಾವು ತಿಳಿದು ಇದನ್ನು ಹೆಚ್ಚು ಮಾಡಬೇಕಾದ ಪರಿಸ್ಥಿತಿ ಇದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದ್ದು ಈಗ ಅದರ ಬಗ್ಗೆ ಒಂದು ಸಮಿತಿಯನ್ನು ಕೂಡ ಮಾಡುತ್ತಿದ್ದೇವೆ. ಈಗ ಅವರಿಗೆ ಒಂದೂವರೆ ಲಕ್ಷದವರೆಗೆ ಕೈಗಾರಿಕೆಯನ್ನು ಪುನಃಶ್ಚೇತನಗೊಳಿಸಲಿಕ್ಕೆ ಕೊಡಬೇಕು ಎಂಬುದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದೇವೆ. ಆಮೇಲೆ ಮಾನ್ಯ ಸದಸ್ಯರು ಸಹಾಯ ಧನವನ್ನು ಕೊಡುವುದರ ಬಗ್ಗೆ ಹೇಳುತ್ತಾ, 31-12-94ಕ್ಕೆ ನಮ್ಮಲ್ಲಿ 2600 ಘಟಕಗಳು ಇದ್ದವು. 30.40 ಕೋಟಿಗಳಿತ್ತು. ಈಗ 1-1-95 ರಿಂದ 31-08-95ರ ವರೆಗೆ ನಾವು ಈಗಾಗಲೇ 26.5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಈಗ ಸದ್ಯಕ್ಕೆ ಜೂನ್ 95 ರಿಂದ ನಮ್ಮಲ್ಲೀಗ ಇರತಕ್ಕಂಥದ್ದು 1.134 ಘಟಕಗಳಿಗೆ ನಾವು ಈಗ ಕೊಡಬೇಕಾಗಿರತಕ್ಕಂಥ ಸಹಾಯಧನ 14.31 ಕೋಟಿ ರೂಪಾಯಿಗಳು. ಅದನ್ನು ಇನ್ನು 5-6 ತಿಂಗಳಲ್ಲಿ ಪೂರ್ಣವಾಗಿ ಕೊಟ್ಟು ಅದನ್ನು ರೆಗ್ಯುಲರೈಸ್ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಆಶ್ರಯ ಯೋಜನೆಯಲ್ಲಿ ನಡೆದ ಅವ್ಯವಹಾರ

629 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆಶ್ರಯ ಯೋಜನೆಯಲ್ಲಿ ಅವ್ಯವಹಾರದ ಬಗ್ಗೆ ಸಮಿತಿ ತನಿಖೆ ವರದಿ ನೀಡಿದ್ದು, ಈ ಬಗ್ಗೆ ಕೈಗೊಳ್ಳಲಾಗಿರುವ ಕ್ರಮಗಳಾವುವು?

ಆ) ಅವ್ಯವಹಾರದ ಬಗ್ಗೆ ಸಲ್ಲಿಸಿರುವ ವರದಿಯನ್ನು ಸರ್ಕಾರ ಅಂಗೀಕರಿಸಿದೆಯೇ;

ಇ) ಅಂಗೀಕರಿಸಿದ್ದಲ್ಲಿ ಅಪರಾಧಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡದಿರಲು ಕಾರಣಗಳೇನು?

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) ವರ್ತೂರು ವಿಧಾನ ಸಭಾ ಕ್ಷೇತ್ರದಲ್ಲಿನ ಹೂಡಿ ಗ್ರಾಮದ ಸ.ನಂ. 145, 149, 150 ಮತ್ತು 152 ರರಲ್ಲಿ ಒಟ್ಟು 70 ಎಕರೆ ಭೂಮಿಯಲ್ಲಿ 1383 ನಿವೇಶನಗಳನ್ನು ಅಭಿವೃದ್ಧಿ ಪಡಿಸಿ ಆಶ್ರಯ ಯೋಜನೆಯಡಿಯಲ್ಲಿ ಹಂಚಿಕೆ ಮಾಡಲಾಗಿದ್ದುದನ್ನು ವಿಭಾಗಾಧಿಕಾರಿಗಳ ವಿಚಾರಣೆಯ ವರದಿಯ ಮೇರೆಗೆ ಎಲ್ಲಾ ನಿವೇಶನ ಹಂಚಿಕೆಗಳನ್ನು ಸರ್ಕಾರಿ ಆದೇಶ ಸಂ. ವನಇ 217 ಪಿಹೆಚ್‌ಎಸ್ 93, ದಿನಾಂಕ: 10-1-1995ರಲ್ಲಿ ರದ್ದುಪಡಿಸಿದೆ. ಆಶ್ರಯ ಯೋಜನೆಯಡಿ ಕರ್ತವ್ಯ ಲೋಪ ಎಸಗಿರುವ ಕಂದಾಯ ಅಧಿಕಾರಿಗಳನ್ನು ಸೇವೆಯಿಂದ ಅಮಾನತ್ತುಗೊಳಿಸಿ ಕಂದಾಯ ಇಲಾಖೆ ಸರ್ಕಾರಿ ಆದೇಶ ನಂ. ಆರ್‌ಡಿ :7:ಎಫ್‌ಇ:95 ದಿನಾಂಕ: 9-2-1995ರಲ್ಲಿ ಹೊರಡಿಸಲಾಗಿತ್ತು. ಸದರಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಕಂದಾಯ ಇಲಾಖೆಯನ್ನು ಕೋರಲಾಗಿದೆ.

ಆ) ಹೌದು. ಅಂಗೀಕರಿಸಿದೆ.

ಇ) ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವಂತೆ ಕಂದಾಯ ಇಲಾಖೆಯನ್ನು ಕೋರಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರವೇ ಆಶ್ರಯ ಯೋಜನೆಯಲ್ಲಿ ಲೂಟಿ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದು ನಂತರ ಜೀರ್ಣ ಮಾಡಿಕೊಳ್ಳಲಿಕ್ಕೂ ಅವಕಾಶ ಮಾಡಿಕೊಡುವಂಥಾಗಿದೆ. ನೋಡಿ, ನೀವು ಉತ್ತರ ಕೊಡುತ್ತಾ 'ಆಶ್ರಯ' ಯೋಜನೆಯಲ್ಲಿ ವರ್ತೂರು ಹೋಬಳಿಯಲ್ಲಿ ಕರ್ತವ್ಯ ಲೋಪ ಮಾಡಿರುವಂಥವರ ಬಗ್ಗೆ ವಿಭಾಗಾಧಿಕಾರಿಗಳಿಂದ ತನಿಖೆಯನ್ನು ಮಾಡಿಸಿದ್ದೀರಿ, ಆದರೆ ಅವರನ್ನು ಅಮಾನತ್ತುಗೊಳಿಸುವುದಕ್ಕೆ 09-02-95ರಲ್ಲಿ ಆದೇಶ ಕೊಟ್ಟಿದ್ದೀರಿ. ಸ್ವಾಮಿ ಈಗಾಗಲೇ 8 ತಿಂಗಳು ಆಯಿತು. ಕಂದಾಯ ಇಲಾಖೆಯವರು ಅವರನ್ನು ಅಮಾನತ್ತು ಗೊಳಿಸುವುದು ಬೇಡವೇ? ನೀವು ವರದಿಯನ್ನು ತರಿಸಿಕೊಂಡು ಮಾಡಿದ ಮೇಲೆ ಅವರನ್ನು ಅಮಾನತ್ತುಗೊಳಿಸುವುದು ಬೇಡವೇ? ಎರಡನೆಯದಾಗಿ ಉತ್ತರದಲ್ಲಿ ಕೇವಲ ವರ್ತೂರು ವಿಧಾನಸಭಾ ಕ್ಷೇತ್ರದ ಬಗ್ಗೆ ಮಾತ್ರ ಹೇಳಿದ್ದೀರಿ, ಇನ್ನು ಎಲ್ಲೆಲ್ಲಿ ಈ ರೀತಿ ತನಿಖೆಯನ್ನು ಮಾಡಿಸಿದ್ದೀರಿ? ಇದೇ ಹಿನ್ನೆಲೆಯಲ್ಲಿ ಶ್ರೀ ಜಿ.ವಿ. ವಿಶ್ವನಾಥ್ ಸಮಿತಿ ಹೌಸಿಂಗ್ ಬೋರ್ಡ್ ಹಗರಣದ ಬಗ್ಗೆ ಸೈಟ್‌ಗಳ ಬಗ್ಗೆ ವರದಿಯನ್ನು ಕೊಟ್ಟಿದ್ದಾರಲ್ಲ ಅದು ಯಾವಾಗ ಕೈ ಸೇರಿತು. ಅದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಾ? ಇದನ್ನೆಲ್ಲಾ ಸದನದ ಮುಂದಿಡಬಹುದೇ?

ಶ್ರೀ ಆರ್. ರೋಶನ್ ಬೇಗ್ (ವಸತಿ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, ಈ 'ಆಶ್ರಯ' ಸ್ಕೀಮ್‌ನಡಿಯಲ್ಲಿ ಏನು ಗೋಲ್‌ಮಾಲ್ ನಡೆದಿದೆ ಅದರ ಬಗ್ಗೆ ಈಗಾಗಲೇ ಎನ್‌ಕ್ವೈರಿಯನ್ನು ಮಾಡಿಸಿದ್ದೇವೆ. ಆ ಎನ್‌ಕ್ವೈರಿ ರಿಪೋರ್ಟ್ ಬಂದಿದೆ. ಅದರ ಪರವಾಗಿ ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ. About five Tahsildars in the city of Bangalore were suspended, but unfortunately ಅವರು CAT ಗೆ ಹೋಗಿ ಮತ್ತೆ ವಾಪಸ್ಸು ಬಂದರು. ಈಗ ಅಪಾರ್ಟ್ ಫ್ರಮ್ ವರ್ತೂರ್ ಈ ಸಿ.ಓ.ಡಿ. ಎನ್‌ಕ್ವೈರಿಯನ್ನು ಉತ್ತರಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಮಾಡಿದ್ದೇವೆ. ಇದರಲ್ಲಿ ಸುಮಾರು 202 ಹಳ್ಳಿಗಳಲ್ಲಿ, ಕೆಂಗೇರಿ, ಯಶವಂತ್‌ಪುರ್, ಉತ್ತರಹಳ್ಳಿ, ಬೇಗೂರು, ಇಂಥ ಕಡೆಯೆಲ್ಲಾ ಫ್ರೀ ಸೈಟ್ಸ್ ಡಿಸ್ಟ್ರಿಬ್ಯೂಶನ್‌ನಲ್ಲಿ ಸರಿಯಾದ ರೀತಿಯಲ್ಲಿ ವಿತರಣೆಯಾಗಿಲ್ಲವೆಂದು ವರದಿ ಬಂದಿದೆ. ಆ ಪ್ರಕಾರ ಅಲಾಟ್‌ಮೆಂಟ್ ಎಲ್ಲವನ್ನೂ ಕ್ಯಾನ್ಸಲ್ ಮಾಡಿದ್ದೇವೆ. ಅಲಾಟ್‌ಮೆಂಟ್‌ನ್ನು ಕ್ಯಾನ್ಸಲ್ ಮಾಡಿ ಯಾರು ಯಾರು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆಯೋ ಅಂಥವರ ಮೇಲೆ ಕ್ರಿಮಿನಲ್

ಕೇಸ್ ಹಾಕುವುದಕ್ಕೆ ಕಂದಾಯ ಮಂತ್ರಿಗಳಿಗೆ ರೆಫರ್ ಮಾಡಿದ್ದೇವೆ. ಇದಕ್ಕೆ ಕಂದಾಯ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಂದಾಯ ಮಂತ್ರಿಗಳಿಗೆ ರೆಫರ್ ಮಾಡಿ ಈಗಾಗಲೇ 8 ತಿಂಗಳಾಗಿದೆ. ಅದಕ್ಕೆ ನಾನು ಹೇಳಿದ್ದುದು, ಇದರಿಂದ ತಪ್ಪಿಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದರಲ್ಲಿ ದಿಬೇ ಆಗುತ್ತದೆ. ಎರಡನೆಯದು, ತಾವು ಬೇರೆ ಬೇರೆ ಅವ್ಯವಹಾರ ನಡೆದಿದೆಯೆಂದು ಹೇಳಿದಿರಿ. ನಾನು ನೇರವಾಗಿ ನಿಮ್ಮನ್ನು ಕೇಳಿದ್ದೇನೆ. ಇದೇ 'ಆಶ್ರಯ' ಯೋಜನೆಗೆ ಸಂಬಂಧಪಟ್ಟಂತೆ 'ಜೆ.ಮಿ. ವಿಶ್ವನಾಥ್ ಸಮಿತಿ' ವರದಿಯನ್ನು ಕೊಟ್ಟಿದೆ. ಆ ವರದಿ ನಿಮ್ಮ ಕೈಗೆ ಸೇರಿದೆಯೇ? ಮತ್ತು ಯಾವಾಗ ನಿಮ್ಮ ಕೈ ಸೇರಿದೆ? ಅದನ್ನು ನೀವು ಈ ಸದನದ ಮುಂದೆ ಇಡುವುದಕ್ಕೆ ತೊಂದರೆ ಏನಾಗಿದೆ? ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದು ನೇರವಾದ ಒಂದು ಪ್ರಶ್ನೆ. ಎರಡನೆಯದಾಗಿ ಈ 'ಆಶ್ರಯ' ಯೋಜನೆಯಡಿಯಲ್ಲಿ ಮನೆ ಕಟ್ಟುವುದಕ್ಕೆ ಏನು ಅಡ್ವಾನ್ಸ್‌ನ್ನು ಕಂಟ್ರಾಕ್ಟರುಗಳಿಗೆ ಕೊಟ್ಟಿದ್ದೀರೋ ಅದೆಲ್ಲಾ ಲೂಟಿಯಾಯಿತು ಅಮೇಲೆ ಸಿ.ಓ.ಡಿ.ಯಿಂದ ತನಿಖೆಯನ್ನು ಮಾಡಿಸಿದಿರಿ. ಸಂಪೂರ್ಣ ಸಿ.ಓ.ಡಿ. ತನಿಖೆ ನಿಮ್ಮ ಕೈಗೆ ಬಂದಿದೆಯೇ? ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದು ನನ್ನ ಎರಡನೆಯ ಪ್ರಶ್ನೆ. ಮೂರನೆಯದಾಗಿ, ರಾಸಕರ ಅಧ್ಯಕ್ಷತೆಯಲ್ಲಿ ಈ ಸಮಿತಿಯನ್ನು ಮಾಡಿ ಕಾರ್ಯಕಲಾಪ ನಡೆಯುತ್ತಿದೆ. ಇದರ ಮೂಲಕ ಸೈಟ್ ಹಂಚುವ ಕಾರ್ಯಕ್ರಮ ನಡೆಯುತ್ತಿದೆ. 20ನೇ ಡಿಸೆಂಬರ್‌ನಲ್ಲಿ ತಾವು ಅಧಿಕಾರಕ್ಕೆ ಬಂದಮೇಲೆ ಅದನ್ನು ಆ ದಿನವೇ ರದ್ದುಮಾಡಿಬಿಟ್ಟಿರಿ.

ಯಾರಾದರೂ ಅಧ್ಯಕ್ಷತೆಯನ್ನು ಮಾಡಿಕೊಳ್ಳಿ. ಆ ಒಂದು ಸಮಿತಿಯನ್ನು ರಚನೆ ಮಾಡಿ ಬಡವರಿಗೆ ಸೈಟುಗಳನ್ನು ಹಂಚಿತಕ್ಕ ಕೆಲಸವನ್ನು ಮಾಡುತ್ತೀರೋ?

ಶ್ರೀ ಆರ್. ರೋಷನ್ ಬೇಗ್ : ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ. ಆ ಬಗ್ಗೆ ವಿಶ್ವನಾಥ್‌ರವರ ಸಮಿತಿಯ ವರದಿ ಬಂದಿದೆ. ಅವರು ಏನು ರೆಕಮೆಂಡೇಷನ್ಸ್ ಮಾಡಿದ್ದಾರೆ, ಅದರ ಬಗ್ಗೆ ಎಸ್ಸಾಮಿನ್ ಮಾಡುತ್ತಿದ್ದೇವೆ. ಸಿ.ಓ.ಡಿ. ವರದಿ ಉತ್ತರ ಹಳ್ಳಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಬಂದಿದೆ. ಆ ಸಿ.ಓ.ಡಿ. ವರದಿಯ ಆದಾರವಾಗಿ action is being taken against the concerned officials.

ಶ್ರೀ ಬಿ.ಎಸ್. ಯಡಿಯೂರಪ್ಪ : ಉತ್ತರಹಳ್ಳಿ ಬಗ್ಗೆ ನಾನು ಕೇಳಿಲ್ಲ. ಮೈಸೂರ್ ಬೋರ್ಡಿನಲ್ಲಿ ಈ ಆಶ್ರಯ ಯೋಜನೆಯಡಿಯಲ್ಲಿ ಮನೆ ಕಟ್ಟುವುದಕ್ಕೆ ದುಡ್ಡು ಕೊಟ್ಟಿದ್ದು, ಕಂಟ್ರಾಕ್ಟರ್ ಅದನ್ನು ಲೂಟಿ ಮಾಡಿ ತಿಂದರು. ಅದರ ಬಗ್ಗೆ ಸಿ.ಓ.ಡಿ ವಿಚಾರಣೆಗೆ ಹಾಕಿದ್ದಿರಿ, ಸಂಪೂರ್ಣ ವರದಿ ನಿಮ್ಮ ಕೈಗೆ ಬಂದಿದೆಯೇ? ಬಂದಿದ್ದರೆ ಯಾರ್ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಇದು ಒಂದು. ಎರಡನೆಯದು ಆಶ್ರಯ ಯೋಜನೆಯಡಿಯಲ್ಲಿ ಬಡವರಿಗೆ ಸೈಟುಗಳನ್ನು ಹಂಚುವ ಸಲುವಾಗಿ ರಾಸಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಲಾಗಿತ್ತು. ಅದನ್ನು ರದ್ದು ಮಾಡಿಬಿಟ್ಟಿದ್ದೀರಿ. ಮಾನ್ಯಮಂತ್ರಿಗಳೂ ಇಲ್ಲೇ ಇದ್ದಾರೆ. 8 ತಿಂಗಳು, 9 ತಿಂಗಳಿಂದ ಅದರ ಪ್ರೊಗ್ರೆಸ್ ನಿಂತು ಹೋಯಿತು. ಈಗಲಾದರೂ ಒಂದು ನಿರ್ದಿಷ್ಟವಾದ ದಿನಾಂಕ, ಸಮಿತಿ ರಚನೆ ಮಾಡಿ, ಬಡವರಿಗೆ ಸೈಟು ಹಂಚುವಂತಹ ಕೆಲಸವನ್ನು ಪ್ರಾರಂಭ ಮಾಡುತ್ತೀರೋ?

ಶ್ರೀ ಆರ್. ರೋಷನ್ ಬೇಗ್ : ಅದಷ್ಟು ಬೇಗ ಪ್ರಾರಂಭ ಮಾಡುತ್ತೇವೆ. ಸಿ.ಓ.ಡಿ. ವರದಿ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದ್ದಾರೆ. ಆ ಸಿ.ಓ.ಡಿ ವರದಿ ಇನ್ನೂ ಬಂದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದು ಸರಿಯಿಲ್ಲ, ರೆಕಾರ್ಡಿಗೆ ತಪ್ಪು ಹೋಗುತ್ತದೆ. ಏನು ಸ್ವಾಮಿ ಹೀಗಾದರೆ, ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಅಧ್ಯಕ್ಷರು : ಒಂದು ಕೆಲಸ ಮಾಡೋಣ. I will with hold this question. ಮಂತ್ರಿಗಳು ದೆಹಲಿಗೆ ಸಮಾವೇಶಕ್ಕೆ ಹೋಗಿದ್ದಾರೆ. ಅವರು ನನ್ನ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆ. ಅವರು ಬಂದ ಮೇಲೆ we can take it up.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಬಹುದು.

ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ, ವ್ಯವಹಾರಗಳ ಸಚಿವರು) : 8ನೇ ಸೆಪ್ಟೆಂಬರ್ 1995ರ 18ನೇ ಪಟ್ಟಿಯಲ್ಲಿ ಲಿಖಿತ ಮೂಲಕ ಉತ್ತರಿಸುವ 63ಪ್ರಶ್ನೆಗಳ ಪೈಕಿ 19ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಕಾರವಾರ - ಅಂಕೋಲ ಪಟ್ಟಣಗಳಿಗೆ ನೀರು ಪೂರೈಸುವ ಬಗ್ಗೆ

1487 - ಶ್ರೀ ವಸಂತ್ ಅಸ್ನೋಟಕರ್ (ಕಾರವಾರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರವಾರ - ಅಂಕೋಲ ಪಟ್ಟಣಗಳಿಗೆ 1993-94 ಹಾಗೂ 1994-95 ಮತ್ತು 1995 ಜುಲೈ ಅಂತ್ಯದವರೆಗೆ ರಾಜ್ಯ ನಗರ ನೀರು ಸರಬರಾಜು ಮಂಡಲಿ ನೀರು ಸರಬರಾಜು ಮಂಡಲಿ ನೀರು ಪೂರೈಸಿದ ದಿನಗಳೆಷ್ಟು ಹಾಗೂ ನೀರಿನ ಪ್ರಮಾಣವೆಷ್ಟು?

ಆ) ಈ ಎರಡು ಪಟ್ಟಣಗಳಿಗೆ ಸಾಕಷ್ಟು ನೀರು ಪೂರೈಸಲು ತೊಂದರೆ ಏನು?

ಇ) ತೀರಾ ದುಸ್ಥಿತಿಯಲ್ಲಿರುವ ಪೈಪ್‌ಲೈನ್ ಬದಲಾವಣೆ ಮಾಡಲು ಸರ್ಕಾರದವರು ಕ್ರಮಕೈಗೊಳ್ಳುವರೆ?

ಈ) ನೀರೆತ್ತುವ ಕೇಂದ್ರದಲ್ಲಿ ಸಂಭವಿಸುವ ವಿದ್ಯುತ್ ವ್ಯತ್ಯಯಕ್ಕೆ ಬದಲಿ ವ್ಯವಸ್ಥೆ ಕೈಗೊಳ್ಳಲಾಗಿದೆಯೇ?

ಉ) ನಗರದ ಹೊಸ ಬಡಾವಣೆಗಳಿಗೆ ನೀರು ಪೂರೈಕೆ ಯೋಜನೆಯನ್ನು ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಮಂಡಲಿಯು ಕಾರವಾರ ಮತ್ತು ಅಂಕೋಲ ಪಟ್ಟಣಗಳಿಗೆ ಪೂರೈಸಿರುವ ನೀರಿನ ಪ್ರಮಾಣ.

ಕಾರವಾರ :

ವರ್ಷ	ನೀರು ಪೂರೈಸಿದ ದಿನಗಳು	ನೀರಿನ ಪ್ರಮಾಣ ದರ ದಶಲಕ್ಷ ಲೀಟರ್‌ಗಳು
1993-94	341	593.50
1994-95	322	415.60